ಅವರು ಏನಾದರೂ ಉತ್ತರ ಕೊಟ್ಟಿದ್ದಾರೋ? ಕೊಡುತ್ತೇವೆಂದು ಹೇಳಿದ್ದಾರೆಯೇ ಎಂಬುದನ್ನು ದಯಮಾಡಿ ತಿಳಿಸಬೇಕು. 200 ಕೋಟಿ ರೂಪಾಯಿ ನಷ್ಟವಾಗಿದೆ. ಎಂದು ಹೇಳಿದ್ದೀರಿ. ಅದನ್ನು ಕೊಡುತ್ತಿದ್ದಾರೋ ಏನೋ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಅಧ್ಯಕ್ಷರು : - ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಸಾಕಷ್ಟು ಉತ್ತರವೂ ಆಗಿದೆ.

ಶ್ರೀ ವಿಜಯಕುಮಾರ್ ಶೆಟ್ಟಿ : - ಚರ್ಚೆಯಾಗಿದೆ. ಪರಿಹಾರ ಆಗಿಲ್ಲ. ಚರ್ಚೆಗಿಂತ ನಮಗೆ ಪರಿಹಾರ ಬೇಕು.

ಅಧ್ಯಕ್ಷರು : - ಪಿ.ಜಿ.ಆರ್ ಸಿಂಧ್ಯಾ ಅವರೇ, ತಮ್ಮ ಪ್ರಶ್ನೆ ಕೇಳಿ.

ವಿಷಯ : ರೇಷ್ಮೆ ಗೂಡಿನ ಬೆಂಬಲ ಬೆಲೆ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 126 (517)

ಶ್ರೀ .ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಬೆಳೆಗಾರರಿಗೆ ಹಾಗೂ ರೇಷ್ಮೆ ಮಾರಾಟ ಮಾಡುವವರಿಗೆ ಬೆಂಬಲ ಬೆಲೆ ಕೊಡಲು ಸರ್ಕಾರದ ನಿರ್ಧಾರ ಕಾರ್ಯಗತ ಆಗಿದೆಯೇ?

ಆ) ರೇಷ್ಮೆ ಗೂಡಿನ ಹೆಲೆ ಕಡಿಮೆಯಾಗುವ ದಿಕ್ಕಿನಲ್ಲಿ ಕೇಂದ್ರ ಸರ್ಕಾರಕ್ಕೆ ರಾಜ್ಯಸರ್ಕಾರ ಕೊಟ್ಟಿರುವ ಮನವಿಗೆ ಪುರಸ್ಕಾರ ಸಿಕ್ಕಿದೆಯೇ?

ಇ) ಸಿಕ್ಕಿದ್ದಲ್ಲಿ ಕೇಂದ್ರ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಡಾ : ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) ಕಚ್ಚಾ ರೇಷ್ಮೆಗೆ ಕನಿಷ್ಠ ಬೆಲೆಯನ್ನು ಕೊಡಲು ಸರ್ಕಾರದ ಆದೇಶವನ್ನು ಈಗಾಗಲೇ ಹೊರಡಿಸಲಾಗಿದೆ.

ಆ) ಸಿಕ್ಕಿದೆ

ಇ) 1. ರಫ್ತು ಮಾಡಿದ ಮೌಲ್ಯದ ಬೆಲೆ ಆಧಾರಗಳ ಮೇಲೆ ಮುಂಗಡ ರಹದಾರಿ ಕೊಡುವ ಬದಲಾಗಿ ರಫ್ತು ಮಾಡಲು ಉಪಯೋಗಿಸಿದ ರೇಷ್ಮೆ ಪ್ರಮಾಣದ ಮೇಲೆ ನೀಡುವುದು.

2. ರೇಷ್ಮೆ ವಸ್ತುಗಳನ್ನು ಶುದ್ಧ ಉಡುಪುಗಳನ್ನು ಹಾಗೂ ಇತರೆ ತಯಾರಾದ ವಸ್ತುಗಳನ್ನು ರಫ್ತು ಮಾಡುವುದಕ್ಕಿಂತ ಮುನ್ನಾ ಕೇಂದ್ರ ರೇಷ್ಮೆ ಮಂಡಳಿ ಪರಿಶೀಲಿಸಿ ಒಪ್ಪಿಗೆ ನೀಡುವುದು.

3. ಆಮದು ಮಾಡಿಕೊಳ್ಳುವ ರೇಷ್ಮೆ ಹಾಗೂ ರಫ್ತು ಮಾಡಬೇಕೆಂದಿರುವ ಸರಕುಗಳ ಪ್ರಮಾಣ 14:1 ಕೆ.ಜಿ.ಗೆ ಬದಲಾಗಿ 1.2 :1 ಕೆ.ಜಿ.ಗೆ ಇಳಿಸಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : - ಅಧ್ಯಕ್ಷರೆ, ಕನಿಷ್ಠ ಬೆಲೆಯ ಆದೇಶವನ್ನು ಆಗಾಗಲೇ ಹೊರಡಿಸಲಾಗಿದೆ ಎಂದು ಹೇಳಿದ್ದಾರೆ. ಆದೇಶ ಹೊರಡಿಸಿರಬಹುದು . ಆದರೆ ಕಾರ್ಯಗತವಾಗಿಲ್ಲ. ಇದನ್ನು ಯಾವಾಗಿನಿಂದ ಕಾರ್ಯಗತ ಮಾಡುತ್ತಾರೆ ಮತ್ತು ಎಷ್ಟು ಹಣವನ್ನು ಈ ವರ್ಷದ ಬಜೆಟ್‌ನಲ್ಲಿ ಇದಕ್ಕೋಸ್ಕರ ಇಟ್ಟಿದ್ದಾರೆ ಎಂದು ನಾನು ಕೇಳುತ್ತೇನೆ.

ಡಾ॥ ಜಿ. ಪರಮೇಶ್ವರ : - ಈಗಾಗಲೇ 19-5-1994ರಲ್ಲಿ ಇದಕ್ಕೆ ಸಂಬಂಧಪಟ್ಟ ಆದೇಶವನ್ನು ಹೊರಡಿಸಿದ್ದೇವೆ. ಯಾವತ್ತಿನಿಂದ ಇದು ಅಸ್ತಿತ್ವಕ್ಕೆ ಬರುತ್ತದೆ ಎನ್ನುವ ವಿಚಾರದಲ್ಲಿ 925 ರೂಪಾಯಿ ಕನಿಷ್ಠ ಬೆಲೆಯನ್ನು ಮಾಂಬಳ್ಳಿಯಲ್ಲಿ ತಯಾರಾಗುವುದಕ್ಕೆ ನಿಗದಿ ಮಾಡಿದ್ದೇವೆ. ಮಾರುಕಟ್ಟೆಯಲ್ಲಿ ಅದಕ್ಕಿಂತ ಹೆಚ್ಚು ಬೆಲೆ ಮಾಂಬಳ್ಳಿ ರೇಷ್ಮೆಗೆ ಇದೆ . ಯಾವಾಗ ಈ ಬೆಲೆ 920ಕ್ಕಿಂತ ಕಡಿಮೆ ಬರುತ್ತದೆ ಆಗ ಬೆಂಬಲ ಬೆಲೆಯನ್ನು ಸರ್ಕಾರ ಎಫೆಕ್ಟಿಗೆ ಕೊಡುತ್ತದೆಂದು ಸದಸ್ಯರಿಗೆ ಹೇಳುತ್ತೇನೆ. ಈಗಾಗಲೇ ನಾವು 10 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಒದಗಿಸಿ ಇದರ ಜೊತೆಗೆ ಬ್ಯಾಂಕಿನ ವತಿಯಿಂದ ಸಾಲವನ್ನು ತೆಗೆದುಕೊಳ್ಳುವ ರೀತಿಯಲ್ಲಿ ಮಾಡಿ ಸುಮಾರು 60 ಕೋಟಿ ರೂಪಾಯಿ ಹಣವನ್ನು ಇದಕ್ಕಾಗಿ ನಿಗದಿಪಡಿಸಿದ್ದೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಅಧ್ಯಕ್ಷರೇ 60 ಕೋಟಿ ರೂಪಾಯಿಗಳನ್ನು ಈ ವರ್ಷ ಬಜೆಟ್‌ನಲ್ಲಿ ಇಟ್ಟಿದ್ದೇವ ಎಂದು ಹೇಳುತ್ತಾರೆ.

ಡಾ॥ ಜಿ. ಪರಮೇಶ್ವರ್ : - ಇದಕ್ಕಾಗಿ ಏನು ಪ್ರೈಸ್ ಸ್ಟೆಬಿಲಿಟಿ ಫಂಡ್ ಅಥಾರಿಟಿ ಎಂದು ಸರ್ಕಾರದಿಂದ ಮಾಡಿದ್ದಾರೆ. ಆ ಹಣದ ವತಿಯಿಂದ ಇವತ್ತಿನ ದಿವಸ 10 ಕೋಟಿ ರೂಪಾಯಿಗಳನ್ನು ಆಗಾಗಲೇ ಒದಗಿಸಿದ್ದೇವೆ. ಇದಕ್ಕೂ ಕೂಡ ಸೂಕ್ತವಾದ ಆದೇಶವನ್ನು ನಾವು ಈಗಾಗಲೇ ಹೊರಡಿಸಿದ್ದೇವೆ. ವಾಣಿಜ್ಯ ಬ್ಯಾಂಕ್ ಜೊತೆಯಲ್ಲಿಯೂ ಕೂಡ ಇವತ್ತಿನದಿವಸ 60 ಕೋಟಿ ರೂಪಾಯಿಗಳಷ್ಟು ಹಣವನ್ನು ಈ ವರ್ಷಕ್ಕೆ ಆಗುವ ರೀತಿಯಲ್ಲಿ ನಾವು ಒದಗಿಸಿಕೊಂಡಿದ್ದೇವೆ.

ಶ್ರೀ ಸಿ ಭೈರೇಗೌಡ : - ಸ್ವಾಮಿ ಆಜ್ಞೆ ಜಾರಿಯಾದಮೇಲೆ ರೇಷ್ಮೆಯನ್ನು ಕೊಂಡುಕೊಂಡಿರತಕ್ಕ ನಿದರ್ಶನ ಇದೆಯೇ? ಕೊಂಡಿದ್ದರೆ ಎಷ್ಟು ಕೊಂಡಿದ್ದೀರಿ? ಈಗ ಕೇಂದ್ರ ಸರ್ಕಾರದ ಗಮನಕ್ಕೆ ತಾವು ಇಲ್ಲಿ ಆಗುತ್ತಿರುವ ಅನಾಹುತವನ್ನು ತಂದಮೇಲೆ ಅವರು ಕೆಲವು ಕ್ರಮ ತೆಗೆದುಕೊಂಡಿದ್ದಾರೆಂದು ಮಂತ್ರಿಗಳು ತಿಳಿಸಿದ್ದಾರೆ. ನಿಮ್ಮ ಅಂದಾಜಿನ ಪ್ರಕಾರ ಈ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಿಂತ ಮೊದಲು ಇಡೀ ದೇಶಕ್ಕೆಎಷ್ಟು ರೇಷ್ಮೆ ಹೊರಗಡೆಯಿಂದ ಅಂದರೆ ಚೈನಾ, ಕೊರಿಯಾ ಮುಂತಾದ ರಾಷ್ಟ್ರಗಳಿಂದ ಅಧಿಕೃತ ಮತ್ತು ಅನಧಿಕೃತ ಮೂಲಗಳಿಂದ ಬರುತ್ತಿತ್ತು? ಈಗ ಕ್ರಮಗಳನ್ನು ತೆಗೆದುಕೊಂಡ ಮೇಲೆ ಎಷ್ಟು ರೇಷ್ಮೇ ನಮ್ಮ ದೇಶಕ್ಕೆ ಬರುತ್ತಿದೆ ಎಂಬುದನ್ನು ದಯವಿಟ್ಟು ಹೇಳುವುದಕ್ಕೆ ಸಾಧ್ಯವೇ?

ಡಾ॥ ಜಿ. ಪರಮೇಶ್ವರ್ : - ಕಳೆದ ವರ್ಷ ಹೊರ ರಾಷ್ಟ್ರದಿಂದ ಕಚ್ಚಾರೇಷ್ಮೆ ಬರುತ್ತಾ ಇದ್ದುದನ್ನು ಅಂದಾಜಿನ ಮೇಲೆ ಆಗಲೇ ಈ ಸದನಕ್ಕೆ ತಿಳಿಸಿದ್ದೇನೆ. ಕೇಂದ್ರ ರೇಷ್ಮೆ ಮಂಡಳಿಯಿಂದ ಕೊಟ್ಟಿರತಕ್ಕ ಅಂಕಿ ಅಂಶದ ಪ್ರಕಾರ

3200 ಮೆಟ್ರಿಕ್‌ಟನ್ ಕಳೆದ ವರ್ಷ ಬಂದಿತ್ತು. ಆದೇಶ ಹೊರಡಿಸಿರತಕ್ಕದ್ದು 13-5-1993ರಲ್ಲಿ. ನಾವು ಕೇಂದ್ರ ಸರ್ಕಾರಕ್ಕೆ ಬೇಡಿಕೆಯನ್ನು ಇಟ್ಟಾಗ ಅವರು ಒಂದು ಆದೇಶವನ್ನು ಹೊರಡಿಸಿ ಏನೇನು ಕ್ರಮ ತೆಗೆದುಕೊಂಡಿದ್ದೇವೆ ಎಂಬುದನ್ನು ಹೇಳಿದ್ದಾರೆ. ಈಗಾಗಲೇ ನಾಲ್ಕೈದು ಕ್ರಮವನ್ನು, ಅಡ್ವಾನ್ಸ್ ಲೈಸನಿಂಗ್‌ಸ್ಕೀಂನಲ್ಲಿ ಅದನ್ನು ನಿಲ್ಲಿಸತಕ್ಕದ್ದಾಗಲೀ ಇದರ ಜೊತೆಗೆ ಫ್ರೀಷಿಪ್‌ಮೆಂಟ್ ಇನ್‌ಸ್ಪೆಕ್ಷನ್ ಮೊದಲು ಏನು ಮಾಡುತ್ತಿದ್ದರು ಅದನ್ನು ರೀಇಂಟ್ರೊಡ್ಯೂಸ್ ಮಾಡಿ ಕ್ವಾಂಟಿಟಿ ಬೇಸ್ಡ್ ಇನ್‌ಪುಟ್ ಔಟ್‌ಪುಟ್ ಬೇಸ್ಡ್ ಅದನ್ನು ವ್ಯಾಲ್ಯೂ ಬೇಸ್ಡ್ ಎಂದು ಮಾಡಿ ಈ ನಾಲ್ಕೈದು ನಿರ್ಧಾರವನ್ನು ಬಹಳ ಶೀಘ್ರವಾಗಿ ತೆಗೆದುಕೊಂಡ ಕಾರಣಕ್ಕೆ ಇವತ್ತಿನದಿವಸ ಕಡಿಮೆಯಾಗಿದೆ. ಆದರೆ ಅದು ಎಷ್ಟು ಕಡಿಮೆಯಾಗಿದೆ ಎಂದು ರಾಷ್ಟ್ರ ಮಟ್ಟದ ವಿಚಾರವಾಗಿರುವುದರಿಂದ ನನಗೆ ಅಂಕಿಅಂಶ ಸಿಗುವುದಿಲ್ಲ. ತದನಂತರ ಅದನ್ನು ಒದಗಿಸಿಕೊಡುವುದಕ್ಕೆ ಆಗುತ್ತದೆ.

11.40 ಎ.ಎಂ

ಡಾ॥ ಡಿ. ಪರಮೇಶ್ : ಇದರ ಜೊತೆಗೆ ಈ ಕ್ರಮ ತೆಗೆದುಕೊಂಡು ಕೇಂದ್ರಸರ್ಕಾರದವರು ಆದೇಶ ಹೊರಡಿಸಿದ ಮೇಲೆ ನಮ್ಮ ಮಾರುಕಟ್ಟೆಯಲ್ಲಿ ಕಚ್ಚಾರೇಷ್ಮೆ ಚೈನಾದಿಂದ ಬರತಕ್ಕದ್ದು ಅಷ್ಟು ಯಥೇಚ್ಛವಾಗಿ ಸಿಗುತ್ತಿಲ್ಲವೆನ್ನುವುದನ್ನು ನಾವು ಕಂಡುಹಿಡಿದಿದ್ದೇವೆ. ಅದರ ಜೊತೆಗೆ ನಾವು ಕೂಡ ಕರ್ನಾಟಕ ರಾಜ್ಯದ ವತಿಯಿಂದ ಒಂದು ಅಮೆಂಡ್‌ಮೆಂಟ್‌ನ್ನು ಈ ಮನೆಯಲ್ಲಿ ಕಳೆದಸಾರಿ ಪಾಸ್ ಮಾಡಿದ್ದು ನಿನ್ನೆ ಅದನ್ನು ಮೇಲ್ಮನೆಯಲ್ಲಿ ಪಾಸ್ ಮಾಡಿ ಇವತ್ತಿನಿಂದ ಅದು ಅಸ್ತಿತ್ವಕ್ಕೆ ಬಂದಿದೆ. ಈ ಅಮೆಂಡ್‌ಮೆಂಟ್‌ನಲ್ಲಿ ಕಚ್ಚಾರೇಷ್ಮೆಯನ್ನು ಕಳ್ಳಸಾಗಣಿಕೆಯಿಂದ ಏನು ಚೈನಾದಿಂದ ತರುತ್ತಾರೆ ಅವರಿಗೆ ಫೈನ್ ಹಾಕತಕ್ಕ ಅಮೆಂಡ್‌ಮೆಂಟ್ ಅದು ಅಸ್ತಿತ್ವಕ್ಕೆ ಬಂದಿದೆ. ಈ ದೃಷ್ಟಿಯಿಂದ ಮಾರುಕಟ್ಟೆಯಲ್ಲಿ ನಾವು ಈಗಾಗಲೇ ಹತೋಟಿಗೆ ತಂದಿದ್ದೇವೆ. ಹಿಂದೆ ಒಂದು ಕೆ.ಜಿ. ಗೂಡಿಗೆ 50-60 ರೂಪಾಯಿ ಬೆಲೆಯಿತ್ತು. ಅದು ಇವತ್ತು 100-150 ರೂಪಾಯಿಗಳಿಗೆ ಹೋಗುತ್ತಿದೆ. ಅದು ಈವೊಂದು ಕಾರಣಕ್ಕಾಗಿ ಎಂಬುದನ್ನು ಮಾನ್ಯಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ವಿಷಯ : ವಿಶ್ವಯೋಜನೆಯಲ್ಲಿ ನಿಗದಿಪಡಿಸಿದ ಆಯವ್ಯಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 127(82)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1992-93, 93-94ರ ವಿಶ್ವ ಯೋಜನೆಯಲ್ಲಿ ಆಯವ್ಯಯದಲ್ಲಿ ನಿಗಧಿಪಡಿಸಿದ ಖರ್ಚು, ಮಾಡಿದ ಹಾಗೂ ಖರ್ಚು ಮಾಡದೇ ಉಳಿಸಿದ ಮೊತ್ತವೆಷ್ಟು?

ಆ) ಈ ಯೋಜನೆಯಲ್ಲಿ ತಯಾರಿಕ ಹಾಗೂ ಉತ್ಪಾದಕರಿಂದ ಖರೀದಿಸಿದ ವಸ್ತುಗಳ ವಿವರ ಹಾಗೂ ಅವುಗಳನ್ನು ಖರೀದಿಸಿದ ಮೊತ್ತವೆಷ್ಟು?

ಇ) ಈ ಯೋಜನೆಯಲ್ಲಿ 92-93 : 93-94ರಲ್ಲಿ ಸರ್ಕಾರ ವಸ್ತುಗಳನ್ನು ಖರೀದಿ ಮಾಡಿದ ಮೊತ್ತ ಮಾರಾಟ ಮಾಡಿದ ಮೊತ್ತ ಹಾಗೂ ವರ್ಷದ ಅಂತ್ಯಕ್ಕೆ ಶಿಲ್ಕು ಮಾಲಿನ ಮೊತ್ತವೆಷ್ಟು?